## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ

PW-2

**OS No**: 22/2016

| ಹೆಸರು | **ನವೀನ್ ಕುಮಾರ್ ಹೆಚ್.ಆರ್** |
|---|---|
| ತಂದೆ/ಗಂಡನ ಹೆಸರು | **ಲೇಟ್ ರಂಗಸ್ವಾಮಿ** |
| ವಯಸ್ಸು | **43 ವರ್ಷ** |
| ಉದ್ಯೋಗ | **ಗ್ರಾಮಆಡಳಿತಾಧಿಕಾರಿ, ಕ್ಯಾತನಹಳ್ಳಿ ವೃತ್ತ** |
| ವಾಸಸ್ಥಳ | **ಹೊಳೆನರಸೀಪುರ** |

ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಆರ್.ಡಿ.ಆರ್. ರವರಿಂದಃ-**

ನಾನು ಕಳೆದ ಒಂದು ವರ್ಷದಿಂದ ಕ್ಯಾತನಹಳ್ಳಿ ವೃತ್ತದಲ್ಲಿ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 1997-98, 1998-99 ನೇ ಸಾಲಿನಲ್ಲಿ ಯಾರು ಕ್ಯಾತನಹಳ್ಳಿ ವೃತ್ತದಲ್ಲಿ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮ್ಯುಟೇಶನ್ ಆಗಬೇಕಾದರೆ ನಾವು ಅದಕ್ಕೆ ಸಂಬಂಧಪಟ್ಟಂತೆ ಒಂದು ಕಡತವನ್ನು ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ. ವಿಭಾಗದ ಪ್ರಕಾರ ಖಾತೆ ಮಾಡುವಾಗ ನೀವು ಯಾವ ದಾಖಲಾತಿಗಳನ್ನು ಪಡೆದುಕೊಳ್ಳುತ್ತೀರಿ

ಎಂದರೆ ಸಾಕ್ಷಿ ಮೊದಲು ನೊಂದಾಯಿತ ಪತ್ರಗಳು ಇಲ್ಲದೇ ಇದ್ದರೂ ಸಹಾ ಖಾತೆ ಮಾಡುತ್ತಿದ್ದೆವು ಆ ಸಮಯದಲ್ಲಿ ಹೇಳಿಕೆ, ಒಪ್ಪಿಗೆ ಪತ್ರ, ಅಫಿಡವಿಟ್ ಮೂಲಕ ವಂಶವೃಕ್ಷ, ಆಧಾರ ಕಾರ್ಡ್ ಅಥವಾ ರೇಶನ್ ಕಾರ್ಡ್ ಕೊಟ್ಟರೆ ಖಾತೆ ಮಾಡುತ್ತಿದ್ದೆವು, ಆದರೆ ಈಗ ನೊಂದಾಯಿತ ಪತ್ರಗಳನ್ನು ಕೊಟ್ಟರೇ ಮಾತ್ರ ಖಾತೆ ಮಾಡುತ್ತವೆ ಎಂದು ನುಡಿಯುತ್ತಾರೆ. ಒಪ್ಪಿಗೆ ಪತ್ರವನ್ನು ಯಾವಾಗ ಪಡೆಯುತ್ತೀರಿ ಎಂದರೆ ಸಾಕ್ಷಿ ಎಲ್ಲರ ಹೆಸರುಗಳನ್ನು ಜಂಟಿಯಾಗಿ ಖಾತೆ ಮಾಡುವಾಗ ಒಪ್ಪಿಗೆ ಪತ್ರವನ್ನು ಪಡೆಯುವುದಿಲ್ಲ, ಒಂದು ವೇಳೆ ಯಾರಾದರೂ ಒಬ್ಬರ ಹೆಸರಿನಲ್ಲಿ ಅಥವಾ ಕೆಲವು ಜನರ ಹೆಸರಿನಲ್ಲಿ ಮಾತ್ರ ಖಾತೆ ಮಾಡಬೇಕು ಎಂದು ಹೇಳಿದಾಗ ಒಪ್ಪಿಗೆ ಪತ್ರವನ್ನು ಪಡೆಯುತ್ತೇವೆ ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳು ತಮಗೆ ಯಾವುದೇ ಪಾಲು ಬೇಡ ಎಂದು ಹೇಳಿದಾಗ ಅವರಿಂದ ಒಪ್ಪಿಗೆ ಪತ್ರ ಮತ್ತು ಹೇಳಿಕೆಗಳನ್ನು ಪಡೆಯುತ್ತೇವೆ. ಒಂದು ಕುಟುಂಬದಲ್ಲಿ ಒಬ್ಬರ ಹೆಸರಿಗೆ ಮಾತ್ರ ಖಾತೆ ಮಾಡಬೇಕೆಂದು ಕೇಳಿದಾಗ ಉಳಿದ ಎಲ್ಲಾ ಸದಸ್ಯರುಗಳ ಒಪ್ಪಿಗೆ ಪತ್ರ ಮತ್ತು ಹೇಳಿಕೆಗಳನ್ನು ಪಡೆಯುತ್ತೇವೆ. ಈ ಎಲ್ಲಾ ಪ್ರಕ್ರಿಯೆಗಳು ಸರಿಯಾಗಿದ್ದರೇ ಮಾತ್ರ ವಿಭಾಗದ ಪ್ರಕಾರ ಖಾತೆ ಮಾಡುತ್ತೇವೆ ಮತ್ತು ಅವರಿಂದ ಮುದ್ರಾಂಕ ಶುಲ್ಕವನನು ಪಡೆದುಕೊಳ್ಳುತ್ತೇವೆ.

ಸಾಕ್ಷಿದಾರರು ದಿನಾಂಕಃ 12.07.2024 ರಂದು ಎ.ಜಿ.ಪಿ.ರವರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ದಿನಾಂಕಃ 19.06.1974ರ ಹಿಂಬರಹವನ್ನು ನಿಪಿ.30 ಎಂದು, ಎಂ.ಆರ್.ನಂ.5/1998-99 ರ ನಿಜ ಪ್ರತಿಯನ್ನು ನಿಪಿ.31 ಎಂದು, ಎಂ.ಆರ್.ನಂ.1/1997-98 ರ ನಿಜ ಪ್ರತಿಯನ್ನು ನಿಪಿ.32 ಎಂದು ಗುರುತಿಸಲಾಯಿತು. ನಿಪಿ.31ರ ದಾಖಲಾತಿ ಕ್ಯಾತನಹಳ್ಳಿ ಗ್ರಾಮದ ಸ.ನಂ.7/1ಕ್ಕೆ ಸಂಬಂಧಿಸಿದ್ದು ಇರುತ್ತದೆ. ನಿಪಿ.31ರ ಪ್ರಕಾರ ಕೆ.ವಿ.ಶಂಭುಲಿಂಗಪ್ಪರವರ ಹೆಸರಿಗೆ ವಿಭಾಗದ ಪ್ರಕಾರ ಸದರಿ ಆಸ್ತಿಯ ಖಾತೆಯಾಗಿರುತ್ತದೆ.

ನಿಪಿ.32ರ ದಾಖಲಾತಿ ಕ್ಯಾತನಹಳ್ಳಿ ಗ್ರಾಮದ ಸ,ನಂ.1ಕ್ಕೆ ಸಂಬಂಧಿಸಿದ್ದು ಇರುತ್ತದೆ. ನಿಪಿ.32ರ ಪ್ರಕಾರ ಕೆ.ವಿ.ಮಂಜುನಾಥ ಬಿನ್ ವೀರಪ್ಪ ರವರ ಹೆಸರಿಗೆ ವಿಭಾಗದ ಪ್ರಕಾರ ಸದರಿ ಆಸ್ತಿಯ ಖಾತೆಯಾಗಿರುತ್ತದೆ. ಮೇಲೆ ಹೇಳಿದ ವಿಭಾಗದ ಪ್ರಕ್ರಿಯೇ ಪ್ರಕಾರವೇ ನಿಪಿ.31 ಮತ್ತು 32ರ ಪ್ರಕಾರ ಅವರವರುಗಳ ಹೆಸರುಗಳಿಗೆ ಖಾತೆಗಳು ಆಗಿರುತ್ತವೆ.

**<u>ಪಾಟೀ ಸವಾಲು ಪ್ರತಿವಾದಿ ನಂ.1, 2(ಎ) ರ ಪರವಾಗಿ ಶ್ರೀ ಕೆ.ಕೆ.ಆರ್. ವಕೀಲರಿಂದ</u>**

ಯಾವುದೇ ಒಂದು ಖಾತೆ ಬದಲಾವಣೆ ಮಾಡಬೇಕಾದರೆ ರೆವಿನ್ಯೂ ಕಾಯ್ದೆ ಪ್ರಕಾರ ಫಾರಂ ನಂ.21 ರಲ್ಲಿ ಸಾರ್ವಜನಿಕ ಸ್ಥಳದಲ್ಲಿ ನೋಟಿಸು ಪ್ರಚಾರ ಪಡಿಸುತ್ತೇವೆ ಎಂದರೆ ಸಾಕ್ಷಿ ಫಾರಂ ನಂ.12ರ ಪ್ರಕಾರ ಸಾರ್ವಜನಿಕರಿಗಾಗಿ ಹಾಗೂ ಫಾರಂ ನಂ.21ರ ಪ್ರಕಾರ ಹಿತಾಸಕ್ತರಿಗೆ ಪ್ರಚಾರ ಪಡಿಸುತ್ತೇವೆ ಎಂದು ನುಡಿಯುತ್ತಾರೆ. ಎಂ.ಆರ್.ನಂ.1/1996-97 ಹಾಗೂ 5/1998-99 ಕ್ಕೆ ಸಂಬಂಧಪಟಟಂತೆ ಫಾರಂ ನಂ.12 ಮತ್ತು 21 ಅನ್ನು ಪ್ರಚಾರ ಪಡಿಸಿದರ ಬಗ್ಗೆ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿ ಆ ದಾಖಲಾತಿಗಳು ಇರುವುದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿ ಹಿಂಬರಹ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹೌದು, ಸದರಿ ಹಿಂಬರಹ ನಿಪಿ.30 ಇರುತ್ತದೆ ಎಂದು ನುಡಿಯುತ್ತಾರೆ. ಒಂದು ವೇಳೆ ಕಡತವು ನಾಶವಾಗಿದ್ದಲ್ಲಿ ಅಥವಾ ಕಳೆದುಹೋದಲ್ಲಿ ಆ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ದೂರು ಸಲ್ಲಿಸಬೇಕು ಮತ್ತು ಆ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶ್ರೀಮತಿ ಗೌರಮ್ಮ ರವರಿಂದ ಅವರ ಮಗ ಕೆ.ವಿ.ಮಂಜುನಾಥ ರವರಿಗೆ ನಿಪಿ.32 ಪ್ರಕಾರ ಆಸ್ತಿಯ ಖಾತೆಯಾಗಿದೆ ಎಂದರೆ ಸರಿ. ಒಂದು ವೇಳೆ ವಿಭಾಗದ ಪ್ರಕಾರ ಖಾತೆ ಬದಲಾವಣೆ ಮಾಡಿದರೆ, ಸದರಿ ವಿಭಾಗ ಪತ್ರವನ್ನು ಕಡತದಲ್ಲಿ ಇಟ್ಟಿರುತ್ತೇವೆ

ಎಂದರೆ ಸರಿ. ಖಾತೆ ಮಾಡುವಾಗ ವರ್ಗಾವಣೆದಾರರಿಂದ ಹೇಳಿಕೆಯನ್ನೂ ಸಹಾ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ನಿಪಿ.32 ಕ್ಕೆ ಸಂಬಂಧಪಟ್ಟಂತೆ ವಿಭಾಗ ಪತ್ರವನ್ನಾಗಲೀ ಅಥವಾ ಹೇಳಿಕೆಯನ್ನಾಗಲೀ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಫಾರಂ ನಂ.12 ಕ್ಕೆ ಗ್ರಾಮಸ್ಥರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ.32 ಕ್ಕೆ ಪೂರಕವಾಗಿರುವ ಫಾರಂ ನಂ.12ರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ವಿಭಾಗ ಪತ್ರದ ಮೂಲಕ ಬಂದಿದೆಯಾ ಅಥವಾ ಹೇಳಿಕೆಯಾ ಮೂಲಕ ಬಂದಿದೆಯಾ ಎಂಬುದರ ಬಗ್ಗೆ ನಿಪಿ.32 ರಲ್ಲಿ ಅಸ್ಪಷ್ಟತೆ ಇದೆ ಎಂದರೆ ಸರಿಯಲ್ಲ. ಯಾವುದೇ ವಾಸ್ತವಿಕ ದಾಖಲಾತಿಗಳು ಇಲ್ಲದೇ ನಮ್ಮ ಇಲಾಖೆಯವರು ನಿಪಿ.32 ಅನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ವಿಭಾಗ ಪತ್ರವಾಗಲೀ, ಹೇಳಿಕೆಯಾಗಲೀ ಮತ್ತು ಯಾವುದೇ ಪೂರಕ ದಾಖಲಾತಿಗಳಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀಲರಗಳನ್ನು ಕೂಗಿ ಕರೆಸಲಾಯಿತು, ಅವರ ಗೈರು ಹಾಜರಿಯ ಮೇರೆಗೆ ಉಳಿದ ಪ್ರತಿವಾದಿಗಳ ಪರ ಪಾಟೀ ಸವಾಲು ಇಲ್ಲ ಎಂದು ತಿಳಿದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.